**ಪಾಠ–11** **ಜೂನ್ 8–14**

# ನಂಬಿಕೆಯ ಕುಟುಂಬಗಳು



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಅ.ಕೃ 10:1–28,34,35; 1 ಕೊರಿಂಥ 2:2; 1 ಥೆಸ 5:21,22, ಯೋಹಾನ 1:12,13 ಮತ್ತು 3:7, 1 ಯೋಹಾನ 5:1.

**ಸ್ಮರಣವಾಕ್ಯ : "ಆದಕಾರಣ... ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯನ್ನಿಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ. ಆತನು ತನ್ನ ಮುಂದೆ ಇಟ್ಟಿದ್ದ ಸಂತೋಷಕ್ಕೋಸ್ಕರ ಅವಮಾನವನ್ನು ಅಲಕ್ಷ್ಯಮಾಡಿ ಶಿಲುಬೆಯ ಮರಣವನ್ನು ಸಹಿಸಿಕೊಂಡು ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ– ಇಬ್ರಿಯ 12:1,2.**

ನಾವು ಜೀವನದ ಯಾವುದೇ ಹಂತದಲ್ಲಿದ್ದರೂ ಸರಿ ಈವಾಗ ಏನನ್ನು ಅನುಭವಿಸುತ್ತಾ ಇದ್ದೇವೆಯೋ ಅಥವಾ ಭವಿಷ್ಯದಲ್ಲಿ ಅನುಭವಿಸುವುದಕ್ಕೆ ಇದ್ದೇವೆಯೋ ಅದಕ್ಕೆಲ್ಲಾ ಸಂಸ್ಕೃತಿಯ ಹಿನ್ನೆಲೆ ಕಾರಣವಾಗಿರುತ್ತದೆ. ನಮ್ಮ ತಂದೆತಾಯಿಗಳು, ಮಕ್ಕಳು, ಮನೆಗಳು ಮತ್ತು ಕುಟುಂಬಗಳು ನಮ್ಮ ಸಭೆಗಳು ಸಹ ಎಲ್ಲಲ್ಲರುತ್ತವೆಯೋ ಅಲ್ಲಿನ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿರುತ್ತವೆ. ಅದೂ ಹೆಚ್ಚಾಗಿಯೇ ಆಗಿರುತ್ತದೆ. ಇದರಲ್ಲಿ ಬೇರೆಯ ಪ್ರಭಾವಗಳೂ ಕೆಲಸ ಮಾಡುತ್ತವೆ. ಸಬ್ಬತ್ತನ್ನು ಶನಿವಾರದಿಂದ ಭಾನುವಾರಕ್ಕೆ ಬದಲಾಯಿಸಿರುವುದು ಹೇಗೆ ಆ ಕಾಲದ ಸಂಸ್ಕೃತಿಯು ಬಲವಾಗಿ ಮತ್ತು ನಕಾರಾತ್ಮಕವಾಗಿ ಸಭೆಯ ಮೇಲೆ ಪ್ರಭಾವ ಬೀರಿದೆ ಎಂಬುದಕ್ಕೆ ಉದಾಹರಣೆಯಾಗಿದೆ. ಭಾನುವಾರ ಸಭೆ ಸೇರಿ ಆರಾಧನೆ ಮಾಡುವಾಗಲೆಲ್ಲಾ ನಮಗೆ ತೀವ್ರವಾಗಿ ಸಂಸ್ಕೃತಿಯ ಪ್ರಭಾವ ಎಷ್ಟು ದೂರ ಹೋಗುತ್ತದೆ ಎಂಬುದನ್ನು ಜ್ಞಾಪಕಪಡಿಸುತ್ತದೆ.

ಕ್ರೈಸ್ತ ಕುಟುಂಬಗಳು ಯಾವಾಗಲೂ ಸಂಸ್ಕೃತಿಯ ಸವಾಲುಗಳನ್ನು ಎದುರಿಸುತ್ತವೆ. ಅನೇಕ ಸಲ ಕೆಟ್ಟ ಪ್ರಭಾವವನ್ನು ಬೀರಿದಾಗ್ಯೂ ಸಂಸ್ಕೃತಿಯ ಪ್ರಭಾವಗಳು ಒಳ್ಳೆಯದಾಗಿರುತ್ತವೆ. ದೊಡ್ಡಸುದ್ದಿ ಏನೆಂದರೆ ಸುವಾರ್ತೆಯ ಶಕ್ತಿ ನಮಗೆ ಬೆಳಕನ್ನೂ, ಆದರಣೆಯ ಬಲವನ್ನೂ ನೀಡುವುದರಿಂದ ಸಂಸ್ಕೃತಿಯು ತರುವ ಸವಾಲುಗಳನ್ನು ನಿರ್ವಹಿಸಬಹುದು.

ಈ ವಾರದ ಪಾಠಗಳಲ್ಲಿ ದೇವರ ಮಕ್ಕಳಾದ ನಾವು ವಿಕೃತವಾದ ಮೋಸಕರವಾದ ಪ್ರಪಂಚದಲ್ಲಿ ದೋಷರಹಿತವಾದ ಮತ್ತು ಯಾವುದೇ ಕೇಡನ್ನು ಮಾಡದ ನಂಬಿಕೆಯ ಕುಟುಂಬಗಳಾಗಿರುವುದು ಹೇಗೆ ಎಂದು ಕಲಿಯುತ್ತೇವೆ (ಫಿಲಿ 2:15).

ಈ ವಾರದ ಪಾಠವನ್ನು ದಿನಾಂಕ 15.06.2019ರ ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ.

**ಭಾನುವಾರ** **ಜೂನ್ 9**

## ಒಳ್ಳೆಯದನ್ನು ಭದ್ರವಾಗಿ ಹಿಡಿಯಿರಿ

ಸುವಾರ್ತೆಯು ಭೂಗೋಳವನ್ನು ಸುತ್ತುವರೆದಿರಲಾಗಿ ಕ್ರೈಸ್ತರು ಆಯಾಪ್ರದೇಶದ ಸಂಸ್ಕೃತಿಗಳನ್ನು ಪದ್ಧತಿಗಳನ್ನು ಎದುರಿಸಬೇಕಾಗುತ್ತದೆ. ಅವುಗಳು ಅನೇಕ ಸಲ ಕೌಟುಂಬಿಕ ಮತ್ತು ಸಾಮಾಜಿಕ ಸಂಬಂಧಗಳಿಗೆ ಸೇರಿದುದುಗಳಾಗಿರುತ್ತವೆ. ವೈವಿಧ್ಯಮಯವಾದ ಅನೇಕ ಸಂಸ್ಕೃತಿಗಳ ನಿಯಮಾನುಸಾರ ಹೇಗೆ ನಡೆದುಕೊಳ್ಳಬೇಕೆಂಬ ದೊಡ್ಡ ಪ್ರಶ್ನೆ, ಕ್ರೈಸ್ತ ಮಿಷನರಿಗಳಿಗೆ ಎದುರಾಯಿತು. ವೈಯಕ್ತಿಕವಾಗಿ ಕೌಟುಂಬಿಕ ಸಂಬಂಧಗಳ ವಿಷಯವಾಗಿ ಅವರಿಗೆ ಸಮಸ್ಯೆಯಾಯಿತು. ಓದಿರಿ : ಅ.ಕೃ 10:1–28,34,35 ಇಲ್ಲಿ ಅನ್ಯ ಸಂಸ್ಕೃತಿಯೊಡನೆ ವ್ಯವಹರಿಸುವಾಗ ಬರುವ ಅಡೆತಡೆಗಳು ಮತ್ತು ಪೂರ್ವಗ್ರಹಗಳನ್ನು ಬಿಟ್ಟು ಬಿಡುವುದರ ಬಗ್ಗೆ ಏನನ್ನು ಕಲಿಯುತ್ತೇವೆ?

ಪ್ರತಿ ಮನುಷ್ಯನ ಪಾಪಗಳ ನಿಮಿತ್ತ ಕ್ರಿಸ್ತನು ಮರಣ ಹೊಂದಿದನು ಎಂಬ ಸತ್ಯವನ್ನು ಜನರು ಇನ್ನೂ ಅರಿತುಕೊಂಡಿಲ್ಲ. ಜನರು ಇದಕ್ಕೆ ಸ್ಪಂಧಿಸುವಂತೆ ಕರೆ ನೀಡುವುದೇ ಕ್ರೈಸ್ತರ ಸಾರ್ವತ್ರಿಕ ಕೆಲಸವಾಗಿತ್ತು. ದೇವರು ಪಕ್ಷಪಾತಿಯಾಗಿಲ್ಲ

ದಿರುವುದರಿಂದ ಕ್ರೈಸ್ತರು ಸಹ ಪ್ರತಿಯೊಬ್ಬರನ್ನು ಗೌರವದಿಂದ ಸಮಾನವಾಗಿ ಕಾಣುವುದಕ್ಕೆ ಕರೆಯಲ್ಪಟ್ಟಿದ್ದಾರೆ. ಇದರಿಂದ ಜನರು ತಮಗೋಸ್ಕರವಾಗಿರುವ ಸುವಾರ್ತೆಯನ್ನು ಸ್ವೀಕರಿಸುವಂತೆ ಸಹಾಯವಾಗುತ್ತದೆ.

ಬೇರೆ ಸಂಸ್ಕೃತಿಯ ಜನರಿಗೆ ಸುವಾರ್ತೆಯನ್ನು ತಲುಪಿಸುವಾಗ ಮೊಟ್ಟ ಮೊದಲ ಕ್ರೈಸ್ತ ಮಿಷನರಿಗಳು ಯಾವ ತೀರ್ಮಾನಗಳನ್ನು ತೆಗೆದುಕೊಂಡರು. ಈ ಕೆಳಗಿನ ಪಠ್ಯಗಳಲ್ಲಿ ಯಾವ ನಿಯಮಗಳನ್ನು ಕಂಡುಕೊಳ್ಳುತ್ತೇವೆ?

ಅ.ಕೃ 15:19, 20, 28, 29; 1 ಕೊರಿಂಥ 2:2 ಮತ್ತು 1 ಥೆಸಲೋನಿಕ 5:21, 22.

ಎಲ್ಲಾ ಸಂಸ್ಕೃತಿಗಳು ಮನುಷ್ಯರು ಬಿದ್ದುಹೋದ ಪರಿಸ್ಥಿತಿಯನ್ನೇ ಬಿಂಬಿಸುತ್ತವೆ. ಆದಾಗ್ಯೂ ದೇವರ ವಾಕ್ಯವನ್ನು ಸಾರುವುದಕ್ಕೆ ಅನುಕೂಲಕರವಾದ ನಂಬಿಕೆಗಳು ಸಹಾ ಆ ಸಂಸ್ಕೃತಿಗಳಲ್ಲಿ ಇರುತ್ತವೆ. ಉದಾಹರಣೆಗೆ ಜಗತ್ತಿನಾದ್ಯಂತ ಜನರು ಹೆಚ್ಚಿನ ಮೌಲ್ಯಗಳನ್ನು ಕೌಟುಂಬಿಕ ಮತ್ತು ಸಮುದಾಯದಲ್ಲಿ ಹತ್ತಿರ ಸಂಬಂಧಗಳಿಗೆ ಕೊಟ್ಟಿದ್ದಾರೆ. ಕ್ರೈಸ್ತರು ಸತ್ಯವೇದದ ತತ್ವಗಳಿಗನುಸಾರವಾದ ಇಂತಹ ಮೌಲ್ಯಗಳನ್ನು ಎತ್ತಿಹಿಡಿದು ಬಲಗೊಳಿಸಬಹುದಾಗಿದೆ.

ಏನೇ ಆಗಲಿ ನಾವು ದೇವರ ವಾಕ್ಯಾನುಸಾರವಿಲ್ಲದವುಗಳಿಗೆ ರಾಜಿ ಮಾಡಿ ಕೊಳ್ಳಬಾರದು, ದುಃಖಕರವಾದ ವಿಷಯವೇನೆಂದರೆ ಸುಳ್ಳು ಕ್ರೈಸ್ತರ ಸಂಸ್ಕೃತಿಗಳನ್ನು ಸತ್ಯವಾದ ಕ್ರೈಸ್ತತ್ವ ಎಂಬಂತೆ ಅವುಗಳಿಗೆ ರಾಜೀ ಮಾಡಿಕೊಂಡು ಅನುಕೂಲ ಮಾಡಿಕೊಟ್ಟಿದ್ದನ್ನು ಸಭೆಯ ಚರಿತ್ರೆಯಲ್ಲಿ ನೋಡುತ್ತೇವೆ.

ಸೈತಾನನು ತನ್ನನ್ನು ಈ ಲೋಕದ ದೇವರೆಂದು ಪ್ರತಿಪಾದಿಸುತ್ತಾ ಜನರಲ್ಲಿ ಗೊಂದಲವನ್ನು ಉಂಟುಮಾಡುತ್ತಾನೆ. ಆದರೆ ಈ ಲೋಕವನ್ನು ದೇವರು ವಿಮೋಚಿಸಿದ್ದಾನೆ ಮತ್ತು ತನ್ನನ್ನು ಹಿಂಬಾಲಿಸುವವರನ್ನು ಸತ್ಯಾತ್ಮನು ಎಲ್ಲಾ ಸತ್ಯಗಳಿಗೆ ನಡೆಸುತ್ತಾನೆ (ಯೋಹಾನ 16:13).

ನಿಮ್ಮ ನಂಬಿಕೆಯು ಸಂಸ್ಕೃತಿಯಿಂದ ಎಷ್ಟು ರೂಪಿತವಾಗಿದೆ. ಅದರಲ್ಲಿ ದೇವರ ವಾಕ್ಯಾನುಸಾರವಾದುದು ಎಷ್ಟು? ಎರಡನ್ನು ಹೇಗೆ ಅರ್ಥಮಾಡಿಕೊಳ್ಳ ಬಲ್ಲಿರಿ? ನಿಮ್ಮ ಉತ್ತರವನ್ನು ತರಗತಿಯಲ್ಲಿ ಚರ್ಚಿಸುವುದಕ್ಕೆ ಸಿದ್ಧವಾಗಿರಿ.

**ಸೋಮವಾರ** **ಜೂನ್ 10**

## ಕುಟುಂಬದ ಮೇಲಿನ ಸಂಸ್ಕೃತಿಯ ಬಲ (ಪ್ರಭಾವ)

ಅವನು ತನ್ನ ಪುತ್ರ ಪೌತ್ರರಿಗೆ– ನೀವು ನ್ಯಾಯ ನೀತಿಗಳನ್ನು ನಡೆಸಿ ಯೆಹೋವನ ಮಾರ್ಗವನ್ನು ಅನುಸರಿಸಬೇಕೆಂದು ಬೋಧಿಸುವಂತೆ ನಾನು ಆದುಕೊಂಡೆನೆಲ್ಲಾ; ಅವನು ಹೀಗೆ ಮಾಡುವುದರಿಂದ ಯೆಹೋವನಾದ ನನ್ನ ವಾಗ್ದಾನವು ನೆರವೇರುವುದು ಅಂದುಕೊಂಡೆನು (ಆ.ಕಾ 18:19). ಕುಟುಂಬಗಳು ನಾನಾ ವಿಧವಾದವುಗಳಾಗಿದ್ದಾಗ್ಯೂ ಅವು ಸಮಾಜವನ್ನು ಕಟ್ಟುತ್ತವೆ : ಹಾಗಾಗಿ ಸಮಾಜದಲ್ಲಿ ಸಂಸ್ಕೃತಿಯ ವಿಶಿಷ್ಟಗುಣಗಳು ನೇರವಾಗಿ ಕುಟುಂಬಕ್ಕೆ ಬಿಗಿಯಲ್ಪಟ್ಟಿವೆ. ಉದಾಹರಣೆಗೆ ಪುರಾತನ ಸಂಸ್ಕೃತಿಯೊಂದರಲ್ಲಿ ತಂದೆಯ ಶವವನ್ನು ತಿನ್ನುವುದು ಮಗನಾದವನ ಕರ್ತವ್ಯವಾಗಿತ್ತು, ಮತ್ತೊಂದು ಸಂಪ್ರದಾಯದಲ್ಲಿ ಮದುವೆಯಾಗುವವನು ಹುಡುಗಿಯ ತಂದೆಗೆ ಅವನ ಶತ್ರು ಜನಾಂಗಗಳ ರುಂಡಗಳನ್ನು ಕಡಿದು ತರಬೇಕಾಗಿತ್ತು. ಈ ಆಧುನಿಕ ಕಾಲದಲ್ಲೂ ಸಹಾ ಮಕ್ಕಳು ಮದುವೆಗೆ ಮುಂಚೆ ಹುಡುಗ ಹುಡುಗಿ ಪರಸ್ಪರ ಪರಿಚಯ ಮಾಡಿಕೊಳ್ಳುವ ಅವಧಿ ವಿಚ್ಛೇದನ, ವಿವಾಹ ಇವುಗಳ ಬಗೆಗಿನ ಪರಿಕಲ್ಪನೆಗಳು ಬೇರೆ ಬೇರೆಯಾಗಿರುತ್ತವೆ.

ನಾವು ಈ ವೈವಿಧ್ಯಮಯವಾದ ಸಂಸ್ಕೃತಿಯ ಜನರುಗಳಿಗೆ ನಮ್ಮ ಸಂದೇಶಗಳನ್ನು ಹೇಳಿಕೊಡುವಾಗ ನಮ್ಮ ನಂಬಿಕೆಗಳನ್ನು ಬಿಟ್ಟುಬಿಡದೆ ಅವನ್ನು ಅವರಿಗೆ ಹೇಗೆ ತಿಳಿಸುವುದೆಂಬುದನ್ನು ಕಲಿತವರಾಗಿರಬೇಕು. ನಮ್ಮ ಕುಟುಂಬಗಳಿಗೆ ಯಾವ ಸಂಪ್ರದಾಯದ ಪ್ರಭಾವವಾಗಿದೆ ಎಂಬುದರ ಅರಿವು ನಮಗಿರಬೇಕು.

ಈ ಕೆಳಗಿನ ಉದಾಹರಣೆಗಳಲ್ಲಿ ಸಂಸ್ಕೃತಿಯು ಕೌಟುಂಬಿಕ ಜೀವನದ ಮೇಲೆ ಯಾವ ಪ್ರಭಾವವನ್ನು ಬೀರಿದೆ? ಈ ಉದಾಹರಣೆಗಳಿಂದ ನಾವು ಯಾವ ತತ್ವಗಳನ್ನು ಕಲಿಯಬಹುದು?

ಆದಿಕಾಂಡ 16:1–3 ..........................................................

ಆದಿಕಾಂಡ 35:1–4 ..........................................................

ಎಜ್ರ 10ನೇ ಅಧ್ಯಾಯ ..............................................................

1 ಅರಸುಗಳು 11:1 ....................................................................

ನಾವ್ಯಾರು ಶೂನ್ಯತೆ (ನಿರ್ವಾತ)ಯಲ್ಲಿ ಜೀವಿಸಲು ಸಾಧ್ಯವಿಲ್ಲ. ನಾವು ಯಾವ ಸಂಸ್ಕೃತಿಯ ನಡುವೆ ಜೀವಿಸುತ್ತಿದ್ದೇವೆಯೋ ಅದರ ಪ್ರಭಾವವು ನಮಗೂ ನಮ್ಮ ಕುಟುಂಬದ ಮೇಲೆಯೂ ಆಗುತ್ತದೆ. ಕ್ರೈಸ್ತರಾದ ನಾವು ನಮ್ಮ ನಂಬಿಕೆಗೆ ಸರಿಹೊಂದುವುದನ್ನು ಹಿಡಿದುಕೊಂಡು ವ್ಯತಿರಿಕ್ತವಾದುದನ್ನು ನಿರಾಕರಿಸುತ್ತಾ ನಾವಿರುವ ಸಂಸ್ಕೃತಿಯೊಳಗೆ ಬದುಕುವ ಜವಾಬ್ದಾರಿಯನ್ನು ನಾವು ಹೊಂದಿದ್ದೇವೆ.

ನಿಮ್ಮದೇ ಆದ ಸಂಸ್ಕೃತಿಯಲ್ಲಿ ಸತ್ಯವೇದಕ್ಕೆ ಅನುಗುಣವಾಗಿರುವ ನಿಮ್ಮ ಕೌಟುಂಬಿಕ ಜೀವನಕ್ಕೆ ಯಾವುದು ಸಹಾಯಕವಾಗಿದೆ? ಯಾವುದು ಸಹಾಯಕವಾಗಿಲ್ಲ? ಅವಶ್ಯಕವಾದ ಸತ್ಯಗಳೊಂದಿಗೆ ರಾಜಿ ಮಾಡಿಕೊಳ್ಳದೆ ನಿಮ್ಮ ನಂಬಿಕೆಯನ್ನು ನಿಮ್ಮ ಸಂಸ್ಕೃತಿಯೊಂದಿಗೆ ಹೇಗೆ ಅಳವಡಿಸಿಕೊಳ್ಳುವಿರಿ?

**ಮಂಗಳವಾರ** **ಜೂನ್ 11**

## ಬದಲಾವಣೆಯ ಕಾಲದಾದ್ಯಂತ ಕುಟುಂಬಗಳನ್ನು ನಿರ್ವಹಿಸುವುದು

ಬದಲಾವಣೆ ಎಂಬುದನ್ನು ನಾವು ತಪ್ಪಿಸಿಕೊಳ್ಳಲಾಗುವುದಿಲ್ಲ. ನಾವು ಯಾವುದೇ ಸಂಸ್ಕೃತಿಯಲ್ಲಿ ಜೀವಿಸುತ್ತಿರಲಿ ಬದಲಾವಣೆಯನ್ನು ತಪ್ಪಿಸಿಕೊಳ್ಳಲಾಗುವುದಿಲ್ಲ. ಇದು ಕುಟುಂಬದಲ್ಲಿ ನಿಲ್ಲದ ಸಂಗತಿಯಾಗಿದೆ. ಜೀವನ ಚಕ್ರದಲ್ಲಿ ಕೆಲವು ಹೀಗೆಯೇ ಆಗುತ್ತವೆ ಎಂದು ಹೇಳಬಹುದು. ಅನೇಕ ಸಂದರ್ಭಗಳಲ್ಲಿ ಬದಲಾವಣೆಯನ್ನು ಮುಂದಾಗಿ ಹೇಳುವುದಕ್ಕಾಗುವುದಿಲ್ಲ; ಸಾವು, ಅನಾಹುತಗಳು, ಯುದ್ಧ ಖಾಯಿಲೆಗಳು ಕೌಟುಂಬಿಕ ನಡೆಗಳು ಅಥವಾ ವೃತ್ತಿಜೀವನದ ಸೋಲುಗಳು ಇತ್ಯಾದಿ. ಅನೇಕ ಕುಟುಂಬಗಳು ತಾವಿರುವಿ ಸಮುದಾಯದಲ್ಲಿ ಮತ್ತು ದೇಶಗಳಲ್ಲಿ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗಳನ್ನು ಎದುರಿಸುತ್ತವೆ. ಮತ್ತೆ ಕೆಲವು ಬದಲಾವಣೆಗಳು ನೇರವಾಗಿ ಸಂಸ್ಕೃತಿಗೆ ಸಂಬಂಧಿಸಿರುತ್ತವೆ.

ಈ ಕೆಳಗೆ ಜನರು ಎದುರಿಸುತ್ತಿರುವ ಆಘಾತಕಾರಿಯಾದ ಬದಲಾವಣೆಗಳ ಉದಾಹರಣೆಗಳಿವೆ. ಈ ಬದಲಾವಣೆಗಳು ಕೌಟುಂಬಿಕ ಜೀವನದ ಮೇಲೆ ಯಾವ ಪರಿಣಾಮವನ್ನು ಬೀರಿವೆ? ಇವುಗಳನ್ನು ಸಂಭಾಳಿಸುವುದಕ್ಕೆ ನಿಮ್ಮಲ್ಲಿ ಯಾವ ತಂತ್ರಗಾರಿಕೆಯಿದೆ? ಯಾವ ರೀತಿಯಾಗಿ ನೀವು ಇವುಗಳಿಗೆ ಬೇರೆಯಾದ ಪ್ರತಿಕ್ರಿಯೆಯನ್ನು ಕೊಡುವಿರಿ?

ಅಬ್ರಹಾಮ, ಸಾರಾ ಮತ್ತು ಲೋಟ (ಆದಿಕಾಂಡ 12:1–5) ಹದೆಸ್ಸಾ (ಏಸಕ್ 2:7–9).

ದಾನಿಯೇಲ ಅನನ್ಯ, ಮೀಶಾಯೇಲ್ ಮತ್ತು ಅಜರ್ಯ (ದಾನಿ 1ನೇ ಅಧ್ಯಾಯ) ಒಬ್ಬನ ಭವಿಷ್ಯದಲ್ಲಿ ಬದಲಾವಣೆಗಳ ಜೊತೆ ನಷ್ಟದ ಮತ್ತು ಅನಿಶ್ಚತೆಯ ಆತಂಕದ ಅನುಭವಗಳು ಬರುತ್ತವೆ. ನಮ್ಮ ಕುಟುಂಬಗಳು ಬದಲಾವಣೆಗಳಿಗೆ ಹೊಂದಿಕೊಳ್ಳುವ ಸಾಮರ್ಥ್ಯದ ಆಧಾರದ ಮೇಲೆ ಈ ಅನುಭವಗಳು ಹೊಸಮಟ್ಟದ ಅಭಿವೃದ್ದಿಗಳನ್ನು ಆತ್ಮೀಯ ವಿಷಯಗಳಲ್ಲಿ ಉನ್ನತಿಯನ್ನು ಹೊಂದಿಕೊಳ್ಳುವಂತೆ ಜನರನ್ನು ಪ್ರೇರಿಸುತ್ತವೆ. ಬದಲಾವಣೆಯು ತಂದ ಅವ್ಯವಸ್ಥೆಯನ್ನು ಸೈತಾನನು ಉಪಯೋಗಿಸಿಕೊಂಡು ದೇವರ ಮೇಲೆ ಅಪನಂಬಿಕೆಯನ್ನು ಸಂಶಯವನ್ನೂ ತರುತ್ತಾನೆ. ದೇವರ ವಾಕ್ಯದಲ್ಲಿರುವ ವಾಗ್ದಾನಗಳು ಕುಟುಂಬ ಮತ್ತು ಸ್ನೇಹಿತರ ಸಂಪನ್ಮೂಲಗಳು ಮತ್ತು ತಮ್ಮ ಜೀವಿತಗಳು ದೇವರ ಕೈಯಲ್ಲಿದೆ ಎಂಬ ಆಶ್ವಾಸನೆ ಜೀವನದ ದೊಡ್ಡ ಅಲ್ಲೋಲಕಲ್ಲೋಲ ಪರಿಸ್ಥಿತಿಯನ್ನು ಸಂಪೂರ್ಣವಾಗಿ ನಿಭಾಯಿಸುವ ನಾಯಕ ನಾಯಕಿಯರಿಗೆ ಸಹಾಯ ಮಾಡುತ್ತವೆ. ನಿಮಗೆ ಆಘಾತಕಾರಿಯಾದ ಬದಲಾವಣೆಯ ಪರಿಣಾಮಗಳನ್ನು ಎದುರಿಸುತ್ತಿರುವ ವ್ಯಕ್ತಿ ಅಥವಾ ಇಡೀ ಕುಟುಂಬ ಗೊತ್ತಿದ್ದರೆ ಅವರಿಗೆ ಸಹಾಯ ಮತ್ತು ಪ್ರೋತ್ಸಾಹ ನೀಡುವಂಥವುಗಳನ್ನು ನಿಜ ಜೀವನದಲ್ಲಿ ಮಾಡಿರಿ.

**ಬುಧವಾರ** **ಜೂನ್ 12**

## ಮೊದಲ ಸಂತತಿಗಿದ್ದ ನಂಬಿಕೆಯೆಡೆಗೆ

ಯೆಹೋಶುವನು ಮತ್ತು ಆತನ ವಂಶಸ್ಥರು ತೀರಿಕೊಂಡಾಗ ನಂಬಿಕೆಯ ಯಾವ ಬಿಕ್ಕಟ್ಟುಗಳು ಇಸ್ರಾಯೇಲ್ಯರಲ್ಲಿ ಕಾಣಿಸಿಕೊಂಡವು? ನ್ಯಾಯ ಸ್ಥಾಪಕರು

2:7–13. ಸಂಘ ಸಂಸ್ಥೆಗಳಲ್ಲಿ (ಸಭೆಗಳಲ್ಲಿ) ಮೌಲ್ಯಗಳು ಮತ್ತು ನಂಬಿಕೆಗಳು ತದನಂತದ ಸಂತತಿಗಳಿಗೆ ಹೇಗೆ ವರ್ಗಾಯಿಸಲ್ಪಡುತ್ತವೆ ಎಂಬುದನ್ನು ಅಧ್ಯಯನಗಳು ತೋರಿಸಿಕೊಡುತ್ತವೆ. ಇವುಗಳ ಸಂಸ್ಥಾಪಕರುಗಳು ತಮ್ಮ ನಂಬಿಕೆಗಳಿಗೆ ಹೆಚ್ಚಿನ ಮಟ್ಟದ ಬದ್ಧತೆಯನ್ನು ಹೊಂದಿರುತ್ತಾರೆ. ಅವರು ತಾನೆ ಮೌಲ್ಯಗಳನ್ನು, ನಂಬಿಕೆಗಳನ್ನು ಹೊಂದಿದವರಲ್ಲಿ ಮೊದಲಿಗರು. ಒಂದು ಅಥವಾ ಎರಡು ಸಂತತಿಗಳು ಕಳೆಯುವುದರೊಳಗೆ ಈ ಮೌಲ್ಯಗಳಲ್ಲಿರುವ ತತ್ವದ ಮೇಲಿನ ದೃಷ್ಟಿಯನ್ನು ತಪ್ಪುತ್ತಾರೆ. ಅವರು ಸಭೆಗಳೊಂದಿಗೆ ಅಭ್ಯಾಸ ಬಲದಿಂದ ಮಾತ್ರವೇ ಮುನ್ನಡೆಯುತ್ತಾರೆ. ಈ ಅಭ್ಯಾಸಗಳು ಮುಂದಿನ ಸಂತತಿಯವರಿಗೆ ಸಂಪ್ರದಾಯಗಳಾಗಿ ಬೆಳೆದುಬಿಡುತ್ತವೆ. ಅವುಗಳಲ್ಲಿ ಸಂಸ್ಥಾಪಕರಿಗಿದ್ದ ಆಶಯಗಳಿರುವುದಿಲ್ಲ.

ದೇವರಿಗೆ ಯಾವಾಗಲೂ ಮಕ್ಕಳಿರುತ್ತಾರೆಯೇ ಹೊರತು ಮೊಮ್ಮಕ್ಕಳಿರುವುದಿಲ್ಲ ಎಂದು ಹೇಳಲಾಗುತ್ತದೆ. ಇದರ ಅರ್ಥವೇನೆಂದು ಆಲೋಚಿಸುವಿರಿ?

ನೋಡಿರಿ ಯೋಹಾನ 1:12,13 ಮತ್ತು 3:7 ಮತ್ತು 1 ಯೋಹಾನ 5:1 ಕ್ರೈಸ್ತರಲ್ಲಿ ಮೌಲ್ಯಗಳನ್ನು ಸಂತತಿಯಿಂದ ಸಂತತಿಯವರಿಗೆ ವರ್ಗಾಯಿಸುವ ಸಾಮಾನ್ಯವಿಧಾನಗಳು.

ಕ್ರೈಸ್ತತ್ವದಲ್ಲಿ ಹಿರಿಯರು ತಮ್ಮ ನಂಬಿಕೆಯನ್ನು ನೇರವಾಗಿ ಕಿರಿಯರಿಗೆ ಹೇಳುವುದರಿಂದ ವೌಲ್ಯಗಳು ಒಂದು ಸಂತತಿಯಿಂದ ಇನ್ನೊಂದು ಸಂತತಿಯವರಿಗೆ ವರ್ಗಾವಣೆ ಮಾಡುವ ಸಾಮಾನ್ಯ ವಿಧಾನಗಳಾಗಿವೆ.

ಒಂದು ಸಭೆಯ ಏನನ್ನು ನಂಬುತ್ತದೋ ಅಥವಾ ತಂದೆ ತಾಯಿಗಳು ಏನನ್ನು ನಂಬುತ್ತಾರೋ ಅದು ನಮ್ಮ ವೈಯಕ್ತಿಕ ನಂಬಿಕೆಯಾಗಿರಲಾರದು. ಕ್ರೈಸ್ತನಾಗಿರುವುದೆಂದರೆ ಚರಿತ್ರೆ ಮತ್ತು ತತ್ವವುಳ್ಳ ಸಂಘಕ್ಕೆ ಸೇರುವುದಕ್ಕಿಂತ ಹೆಚ್ಚಿನದಾಗಿದೆ.

ನಿಜವಾದ ನಂಬಿಕೆಯೆಂಬುದು ಸ್ವಾಭಾವಿಕವಾಗಿ ಒಂದು ಸಂತತಿಯಿಂದ ಇನ್ನೊಂದು ಸಂತತಿಗೆ ಹರಿದುಬರುವ ವಂಶವಾಹಿನಿಗಳಂತಲ್ಲ. ಪ್ರತಿಯೊಬ್ಬನೂ ವೈಯಕ್ತಿಕವಾಗಿ ಕ್ರಿಸ್ತನನ್ನು ತಾನೇ ಅರಿತವನಾಗಿರಬೇಕು. ಇಡೀ ಸಭೆಯು

ವಿಶೇಷವಾಗಿ ತಂದೆ ತಾಯಿಗಳು ಯೌವನಸ್ಥರಿಗೆ ಸರಿಯಾದುದನ್ನು ಆಯ್ಕೆ ಮಾಡುವುದಕ್ಕೆ ಸಹಾಯಕವಾಗಿರುವ ಪರಿಸರವನ್ನು ಸೃಷ್ಟಿಸುವವರಾಗಿರಬೇಕು. ಆದರೆ ಕಡೆಯಲ್ಲಿ ಸಂತತಿ ಉಳಿಯುವುದು ಅಥವಾ ಅಳಿಯುವುದು ಒಂದುಕಾಲಕ್ಕೆ ಒಬ್ಬ ವ್ಯಕ್ತಿಗೆ ಅನ್ವಯವಾಗುವ ಸುವಾರ್ತೆಯಿಂದ. ಜೋಯ್ ಎಂಬುವನು ನಿರೀಶ್ವರವಾದದರಿಂದ ಹೊರಬಂದು ಬಲಯುತವಾದ ಪರಿವರ್ತನೆಯ ಅನುಭವವನ್ನು ಹೊಂದಿದ ಅಡ್ವೆಂಟಿಸ್ಟನಾಗಿದ್ದಾನೆ. ಆತನು ಅಡ್ವೆಂಟಿಸ್ಟಳೊಬ್ಬಳನ್ನು ಮದುವೆಯಾದನು, ಮಕ್ಕಳಾದವು, ಅವರು ಅದೇ ನಂಬಿಕೆಯಲ್ಲಿ ಬೆಳೆದರು. ಒಂದು ದಿನ ತನ್ನ ಮಕ್ಕಳ ಆತ್ಮೀಕ ಪರಿಸ್ಥಿತಿಯನ್ನು ಕುರಿತು "ಅಯ್ಯೋ, ನನ್ನ ಮಕ್ಕಳಿಗೆ ನನಗಾದ ಅನುಭವವು ಅವರಿಗೂ ಆಗಿರುತ್ತಿದ್ದರೆ!" ಎಂಬುದಾಗಿ ಅಂದುಕೊಂಡನು. ನೀವು ಜೋಯ್‌ನ ಜೊತೆಗಿರುತ್ತಿದ್ದರೆ ಆತನಿಗೆ ಏನನ್ನು ಹೇಳಿರುತ್ತಿದ್ದಿರಿ?

**ಗುರುವಾರ** **ಜೂನ್ 13**

## ಇಪ್ಪತ್ತೊಂದನೆ ಶತಮಾನದ ಓಟಗಾರರು

ಯೂಜೆನ್ ಪೀಟರ್‌ಸನ್ ಎಂಬಾತನಿಗೆ ತನ್ನ ಬೈಬಲ್‌ನಲ್ಲಿ ತನಗೆ ಪ್ರಿಯವಾದ ಸಂದೇಶವು ಸಂದೇಶ ಎಂಬ ಪದವಾಗಿತ್ತು. ಬೈಬಲ್‌ನಲ್ಲಿ ಎಲ್ಲೆಲ್ಲಿ ಸುವಾರ್ತೆ ಎಂಬ ಪದ ಬರುತ್ತದೋ ಅಲ್ಲೆಲ್ಲಾ ಈತನು ಸಂದೇಶ ಎಂಬ ಪದವನ್ನು ಉಪಯೋಗಿಸುತ್ತಿದ್ದನು. ಯೇಸುಕ್ರಿಸ್ತನನ್ನು ಕುರಿತು ಶುಭವಾರ್ತೆ ಏನೆಂದರೆ ಈ ನಿಜವಾದ ಸಂದೇಶವು ಇಂದಿನ ಪ್ರಪಂಚಕ್ಕೆ ಇನ್ನೂ ಅಗತ್ಯವಾಗಿದೆ ಎಂಬುದೇ.

ಕ್ರೈಸ್ತಕುಟುಂಬಗಳು ಸುವಾರ್ತೆಯನ್ನು ಒಟ್ಟಾಗಿ ಅನುಭವಿಸುವುದಕ್ಕೂ ಮತ್ತು ಇತರರು ಯಾವುದೇ ಸಂಸ್ಕೃತಿಯಲ್ಲಿ ಜೀವಿಸುತ್ತಿದ್ದರೂ ಅದನ್ನು ಹಂಚುವುದಕ್ಕೂ ಕರೆಯಲ್ಪಟ್ಟಿವೆ. ಸಂದೇಶ ಎಂಬುದನ್ನು ಈ ಕೆಳಗೆ ಕೊಟ್ಟಿರುವ ಸತ್ಯವೇದ ಪಠ್ಯಗಳಿಂದ (ವಚನಗಳಿಂದ) ಹೇಗೆ ಅರ್ಥೈಸಬಹುದು?

ಮತ್ತಾಯ 28:5–7, ಯೋಹಾನ 3:16, ರೋಮ 1:16,17 ಮತ್ತು 1 ಕೊರಿಂಥ 2:2 ಮತ್ತು 2 ಕೊರಿಂಥ 5:8–21.

ಶಿಷ್ಯರು ಎಲ್ಲಾ ಕಡೆಗೆ ಓಡಿಹೋಗಿ ಸಾರುತ್ತಿದ್ದ ಯೇಸುಕ್ರಿಸ್ತನ ಪುನರುತ್ಥಾನವು ಅವರಿಗೆ ಮೊಟ್ಟಮೊದಲ ವರ್ತಮಾನವಾಗಿತ್ತು. ಕ್ರೈಸ್ತ ಕುಟುಂಬಗಳು ಇಂದು "ಆತನು (ಕ್ರಿಸ್ತನು) ಎದ್ದಿದ್ದಾನೆ" ಎಂದು ಸಾರುತ್ತಿರುವ ಓಟಗಾರರ ಉದ್ದದ ಸಾಲನ್ನು ಸೇರುತ್ತವೆ (ಮತ್ತಾಯ 28:7). ಯೇಸುಕ್ರಿಸ್ತನ ಪುನರುತ್ಥಾನವು ನಿಜವಾದುದಾಗಿರಲಾಗಿ ಅದು ಕ್ರಿಸ್ತನು ತನ್ನ ಬಗ್ಗೆ, ದೇವರು ಮತ್ತು ಪಾಪಿಗಳಿಗೆ ಆತನು ತೋರುವ ಪ್ರೀತಿಯ ಬಗ್ಗೆ, ಕ್ಷಮಾಪಣೆಯ ಬಗ್ಗೆ ಮತ್ತು ಆತನಲ್ಲಿ ನಂಬಿಕೆ ಇಟ್ಟವರಿಗೆ ಸಿಗುವ ನಿತ್ಯಜೀವದ ಆಶ್ವಾಸನೆಯ ಬಗ್ಗೆ ಜನರಲ್ಲಿ ವಿಶ್ವಾಸವನ್ನು ಹುಟ್ಟಿಸುತ್ತದೆ.

ನಮಗೆ ಸುವಾರ್ತೆಯ ಬಗ್ಗೆ ಕಾತರವಿರಬೇಕು. ಸತ್ಯವೇದವು ಯೇಸುಕ್ರಿಸ್ತನ ಮೊದಲ ಅನುಯಾಯಿಗಳ ಮೇಲೆ ಸುವಾರ್ತೆಯು ಮಾಡಿದ ದೊಡ್ಡ ಪರಿಣಾಮದ ಕಿರುನೋಟವನ್ನು ಕೊಡುತ್ತದೆ. ಅವರು ತಮ್ಮ ಮನೆಯ ಬಾಗಿಲುಗಳನ್ನು ಸತ್ಯವೇದದ ಅಧ್ಯಯನಕ್ಕೆ ಮುಕ್ತವಾಗಿ ತೆರೆಯುತ್ತಿದ್ದರು. ಅವರು ತಮ್ಮ ತಮ್ಮ ಆಸ್ತಿಗಳನ್ನು ಮಾರಿ ಬಂದ ಹಣವನ್ನು ಹುದುವಾಗಿ ಇಡುತ್ತಿದ್ದರು, ಒಟ್ಟಾಗಿ ಪ್ರಾರ್ಥಿಸುತ್ತಿದ್ದರು, ಹಣವನ್ನು ಸಮನಾಗಿ ಹಂಚಿಕೊಳ್ಳುತ್ತಿದ್ದರು. ಒಬ್ಬರಿಗೊಬ್ಬರು ಪರಾಂಬರಿಸುತ್ತಿದ್ದರು. ಇಡೀ ಕುಟುಂಬಗಳು ಸಂದೇಶಗಳನ್ನು ಅಪ್ಪಿಕೊಳ್ಳುತ್ತಿದ್ದವು. ಅವರು ಅಷ್ಟುಬೇಗ ಪರಿಪೂರ್ಣರಾದ ಜನರಾಗಿದ್ದರೆ? ಇಲ್ಲವೇ ಇಲ್ಲ! ಅವರ ನಡುವೆಯೂ ಕೆಲವು ಜಗಳ ಮತ್ತು ಅಸಮಾಧಾನಗಳು ಇದ್ದವೆ? ಹೌದು. ಆದಾಗ್ಯೂ ಕ್ರಿಸ್ತನ ಅನುಯಾಯಿಗಳಾಗಿದ್ದವರು ಒಬ್ಬರಿಗೊಬ್ಬರು ಭಿನ್ನವಾಗಿದ್ದರು. ಅವರು ದೇವರ ಅವಶ್ಯಕತೆಗಳನ್ನು, ಪರಸ್ಪರ ಅವಶ್ಯಕತೆಗಳನ್ನು ಒಪ್ಪಿದವರಾಗಿದ್ದರು.

ಯೇಸುಕ್ರಿಸ್ತನು ಗೆತ್ಸೆಮನೆ ತೋಟದಲ್ಲಿ ಮಾಡಿದ ಪ್ರಾರ್ಥನೆಯನ್ನು ನೆರವೇರಿಸಲು ಅವರು ಮನೆಯಲ್ಲಿ ಮತ್ತು ಸಭೆಯಲ್ಲಿ ಸಾಮರಸ್ಯದಿಂದ ಇರುತ್ತಿದ್ದರು (ಯೋಹಾನ 17:1–23).

ಅವರು ಒಬ್ಬರಿಗೊಬ್ಬರು ಮತ್ತು ನಂಬಿಕೆಯಿಲ್ಲದವರಿಗೆ ದಿಟ್ಟ ಸಾಕ್ಷಿಗಳಾಗಿದ್ದರು. ತಮ್ಮ ನಂಬಿಕೆಗಳಿಗಾಗಿ ಜೀವನವನ್ನೇ ಅಪಾಯಕ್ಕೆ ಈಡುಮಾಡಿಕೊಳ್ಳುತ್ತಿದ್ದರು.

ಇದು ನಮ್ಮ ವಿಷಯದಲ್ಲೂ ಹಾಗೆಯೇ ಇರುತ್ತದೆ. ಈಗಿನ ಪ್ರಚಲಿತ ಕಾಲದಲ್ಲಿಯೂ ದೈವೀಕ ವಿಷಯದಲ್ಲಿ ಪೂರ್ವಗ್ರಹ ಪೀಡಿತರಾಗಿರುವಂತೆ ಇನ್ನಿತರ ವಿಷಯುಗಳಲ್ಲಿಯೂ ಉದ್ವೇಗಿಗಳಾಗಿರುವವರಿಗೆ ಈಗಲೂ ಕರೆಯುವಿಕೆಯಿದೆ. ದೇವರ ಸುವಾರ್ತೆಯ ಬಗ್ಗೆ ಮನುಷ್ಯರ ಹೃದಯಗಳಲ್ಲಿ ಉದ್ವೇಗ (ಕಾತರ) ತುಂಬಿಸಲು ಆತ್ಮನು ತವಕಿಸುತ್ತಾನೆ. ಶುಭವಾರ್ತೆಯು ನಿಜವಾಗಿಯೂ ದೇವರ ವಾಕ್ಯದಲ್ಲಿ ಒಳ್ಳೆಯದಾಗಿರುವಂತೆ ನಮ್ಮ ಹೃದಯದಲ್ಲೂ ಒಳ್ಳೆಯದಾಗಿದ್ದರೆ ಅದರ ಹಂಚುವಿಕೆಯು ಸಹಜವಾಗಿ ನಿರಂತರವಾಗಿರುತ್ತದೆ.

ನಮ್ಮ ಸ್ವಂತ ಕುಟುಂಬವು ಯಾವ ಸಂದೇಶವನ್ನು ಹಂಚುವುದಕ್ಕೆ ಕರೆಯಲ್ಪಟ್ಟಿದೆಯೋ ಆ ಸಂದೇಶದ ಹರಿಕಾರನಾಗುವುದಕ್ಕೆ ನಮ್ಮ ಕುಟುಂಬದಲ್ಲಿ ಯಾವ ಬದಲಾವಣೆಯನ್ನು ಮಾಡಿಕೊಳ್ಳುವುದು ಅವಶ್ಯಕ?

**ಶುಕ್ರವಾರ** **ಜೂನ್ 14**

**ಹೆಚ್ಚಿನ ಚಿಂತನೆ :** ಎಲೆನ್ ಜಿ ವೈಟ್‌ರವರ ಪ್ರಾಫೆಟ್ಸ್ ಮತ್ತು ಕಿಂಗ್ಸ್ ಪುಸ್ತಕದ "ಇನ್ ದಿ ಕೋರ್ಟ್ ಆಫ್ ಬಾಬಿಲೋನ್" ಎಂಬ ಅಧ್ಯಾಯದಲ್ಲಿ ಪುಟ 479–490.

ವರ್ಡ್ಸ್ ಆಫ್ ಕಾಶನ್ ಎಂಬ ಅಧ್ಯಾಅದಲ್ಲಿ ಪುಟ 330, 331, ಗಾಸ್ಪೆಲ್ ವರ್ಕರ್ಸ್ ಪುಸ್ತಕದ ರಿಜಾಸಿಂಗ್ ಇನ್ ದಿ ಲಾರ್ಡ್ ಎಂಬ ಅಧ್ಯಾಯದಲ್ಲಿ ಪುಟ 115–126.

ದೇವರಲ್ಲಿ ದಾಕ್ಷಿಣ್ಯವಿಲ್ಲ (ಪಕ್ಷಪಾತವಿಲ್ಲ) ಕ್ರಿಸ್ತನ ಧರ್ಮವನ್ನು ಅಂಗೀಕರಿಸುವುದನ್ನು ಅದು ಉನ್ನತವಾದ ಆಲೋಚನೆಗೂ ಹಾಗೂ ಕಾರ್ಯಕ್ಕೂ ಮೇಲೆತ್ತುತ್ತದೆ. ತನ್ನ ಮಗನ ಬಲಿಯಿಂದ ಮಾನವಕುಲವು ಖರೀದಿಸಲ್ಪಟ್ಟದ್ದಾಗಿದೆ. ಹಾಗಾಗಿ ಈ ಮಾನವ ಕುಲವನ್ನು ದೇವರು ಪ್ರೀತಿಸುವ ವಸ್ತುವನ್ನಾಗಿ ಅರ್ಪಿಸುತ್ತದೆ. ಕ್ರಿಸ್ತನ ಪಾದತಲದಲ್ಲಿ ಉಳ್ಳವರು ಮತ್ತು ಬಡವರು ಕಲಿತವರು ಮತ್ತು ಅಜ್ಞಾನಿಗಳು ಎಲ್ಲರೂ ಒಂದಾಗಿ ಸೇರುತ್ತಾರೆ. ಇವರಲ್ಲಿ ಜಾತಿಯ ಆಲೋಚನೆಯಾಗಲೀ ಲೌಕಿಕ ಪ್ರಾಮುಖ್ಯತೆಯಾಗಲೀ ಇರುವುದಿಲ್ಲ. ಯಾವಾತನು ನಮ್ಮ ಪಾಪಗಳಿಂದ ಇರಿಯಲ್ಪಟ್ಟನೋ ಅವನನ್ನು ದೃಷ್ಟಿಸಲಾಗಿ ಇಹಲೋಕದ

ಎಲ್ಲಾ ಭಿನ್ನತೆಗಳು ಮರೆತು ಹೋಗುತ್ತವೆ. ಸ್ವನಿರಾಕರಣೆ, ಕೃಪಾಭಾವ, ಪರಲೋಕದಲ್ಲಿ ಅತಿಶಯವಾಗಿ ಸ್ತುತಿಸಲ್ಪಡುವವನ ಅನಂತವಾದ ಅನುಕಂಪ ಇವೆಲ್ಲವೂ ಮನುಷ್ಯನ ಅಹಂಕಾರ, ಸ್ವಗೌರವ, ಜಾತೀಯತೆ ಮುಂತಾದವುಗಳನ್ನು ನಾಚಿಕೆಪಡಿಸುತ್ತವೆ. ಶುದ್ಧವಾದ ಪವಿತ್ರವಾದ ಧರ್ಮವು ಪರಲೋಕದಲ್ಲಿ ಹುಟ್ಟಿದ ನಿಯಮಗಳನ್ನು ತೋರಿಸುತ್ತದೆ. ಈ ನಿಯಮಗಳು ಸತ್ಯದಲ್ಲಿ ಶುದ್ಧೀಕರಣ ಹೊಂದಿದ್ದವರನ್ನು ಏಕತೆಗೆ ತರುತ್ತವೆ. ಕ್ರಿಸ್ತನು ರಕ್ತಕೊಟ್ಟುಕೊಂಡುಕೊಂಡ ಆತ್ಮಗಳು ಯಾರಿಂದ ವಿಮೋಚನೆಗೊಂಡವಿಯೋ ಆತನ ಮೇಲೆ ಆಧಾರಗೊಂಡಿವೆ.

## ಚರ್ಚಿಸಬೇಕಾದ ಪ್ರಶ್ನೆಗಳು

1. ತರಗತಿಯಾಗಿ ಭಾನುವಾರದ ಅಧ್ಯಯನಕ್ಕೆ ನಿಮ್ಮ ಉತ್ತರಗಳನ್ನು ಚರ್ಚಿಸಿರಿ.
2. ನಮ್ಮ ಕೌಟುಂಬಿಕ ಜೀವನಕ್ಕೆ ಕ್ರಾಂತಿಯುಂಟುಮಾಡುವ ಯಾವ ನಿಯಮಗಳು ಎಲೆನ್ ಜಿ ವೈಟಮ್ಮನವರ ಹೇಳಿಕೆಗಳಲ್ಲಿವೆ?
3. ಯೌವನಸ್ಥ ವಿಶ್ವಾಸಿಗಳನ್ನು ನಿಮ್ಮ ಸ್ಥಳೀಯ ಸಭೆ ಹೇಗೆ ಪೋಷಿಸುತ್ತದೆ? ಈ ಮುಖ್ಯವಾದ ಕಾರ್ಯದಲ್ಲಿ ನೀವು ತರಗತಿಯಾಗಿ ಹೇಗೆ ಸಹಾಯ ಮಾಡುವಿರಿ?
4. ನಮ್ಮ ನಂಬಿಕೆಗಳನ್ನು ನಮ್ಮ ಮುಂದಿನ ಸಂತತಿಗೆ ವರ್ಗಾಯಿಸುವ ಪ್ರಯತ್ನದಲ್ಲಿ ಯಾವ ಸವಾಲುಗಳಿವೆ?
5. ಯಾವ ವಿಧವಾಗಿ ನಾವು ಜೀವಿಸುತ್ತಿರುವ ಸಂಸ್ಕೃತಿಯು ಕುಟುಂಬದ ಮೇಲೆ ಒಳ್ಳೆಯದಕ್ಕಾಗಿ ಪರಿಣಾಮ ಬೀರುತ್ತದೆ? ಯಾವ ರೀತಿಯಲ್ಲಿ ಕೆಟ್ಟದಕ್ಕಾಗಿ ಪರಿಣಾಮ ಬೀರುತ್ತದೆ?